MR. SPEAKER.—Important points have been urged and several authorities have been quoted by several Members. I shall examine the matter carefully and will give my ruling when the House re-assembles next.

ಶ್ರೀ ಕೆ.ಬಿ. ಶಿವಯ್ಯ.—ಮಾನ್ಯ ಗೋವಿಂದಭಟ್ಟ ಅವರು ಮಂತ್ರಿಗಳ ತಲೆ ತೆಗೆಯಿರಿ ಎಂದು ಹೇಳಿದ್ದಾರೆ. ಅದರ ಬಗ್ಗೆ ನಮ್ಮ ಮಂತ್ರಿಗಳು ಏನಾದರೂ ಸರ್ಕಾರದ ವತಿಯಿಂದ ಹೇಳುತ್ತಾರೆಯೇ ?

ಅಧ್ಯಕ್ಷರು.—ನಾನು ಮೊದಲೇ ಅವರನ್ನು ಕೇಳಿದೆ, ಅವರೇನೂ ಹೇಳಲಿಲ್ಲ. ಈ ವಿಷಯದ ಬಗ್ಗೆ ನಾನು ನನ್ನ ರೂಲಿಂಗನ್ನು ರಿಸರ್ವ್ ಮಾಡಿದ್ದೇನೆ. ಸರ್ಕಾರದವರು ಇದರ ಬಗ್ಗೆ ಏನಾದರೂ ಹೇಳುವುದು ಬಿಡುವುದು ಪ್ರಿವಿಲೇಜ್ ವಿಷಯದಲ್ಲಿ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದರಲ್ಲಿ ಸರ್ಕಾರದ ವ್ಯೂ ಹೇಳುವುದು ಬರುವುದಿಲ್ಲ. ಇದರಲ್ಲಿ ಸದನದ ಅಭಿಪ್ರಾಯ ಮುಖ್ಯ. It is for the Chair to take a decision. Government as such cannot have any view.

ಗಮನ ಸೆಳೆಯುವ ಸೂಚನೆ

ಪೋಲೀಸ್ ಅಧಿಕಾರಿಗಳಲ್ಲಿ ಅತೃಪ್ತಿ ಮತ್ತು ಅವರಲ್ಲಿರತಕ್ಕ ಆಶಿಸ್ತಿನ ಬಗ್ಗೆ.—

† ಶ್ರೀ ಪಿ. ರಾಮದೇವ್.—ಸಭಾಧ್ಯಕ್ಷರೇ, ಇತ್ತೀಚಿಗೆ ಬೆಂಗಳೂರು ನಗರದ ಕೆಳಮಟ್ಟದ ಪೋಲೀಸ್ ಅಧಿಕಾರಿಗಳ ಅತೃಪ್ತಿ ಮತ್ತು ಅವರಲ್ಲಿರತಕ್ಕ ಆಶಿಸ್ತಿನ ಬಗ್ಗೆ ನಾನು ಸರ್ಕಾರದ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಗುಂಡೂರಾವ್ (ಮುಖ್ಯ ಮಂತ್ರಿಗಳು).—ದಿನಾಂಕ ೯-೪-೧೯೮೦ ರಂದು ಬೆಳಿಗ್ಗೆ ಸುಮಾರು ೨ ಗಂಟೆಯಲ್ಲಿ ಮಾಗಡಿರೋಡ್ಡಿನಲ್ಲಿರುವ ಪೋಲೀಸ್ ಸ್ಟೇಷನ್‌ನ ಸಬ್ ಇನ್ಸ್‌ಪೆಕ್ಟರ್ ಆದ ಶ್ರೀ ಸುನಿಲ್ ಕುಮಾರ್ ರವರು ಕಂಟೋನ್‌ಮೆಂಟ್ ರೈಲ್ವೆ ಸ್ಟೇಷನ್ ಹತ್ತಿರ ಒಬ್ಬ ಅಪರಿಚಿತನು ಚೂರಿಯಿಂದ ಇಬ್ಬರು ರೈಲ್ವೆ ಕೂಲಿಗಳನ್ನು ಇರಿದು ಚೂರಿಯನ್ನು ಬೀಸುತ್ತಿರುವಾಗ್ಗೆ ಅವನನ್ನು ಹತೋಟಿಗೆ ತರಲು ಪ್ರಯತ್ನಿಸಿದಾಗ ಅವರನ್ನು ಸದರಿ ಅಪರಿಚಿತನು ಚೂರಿಯಿಂದ ಇರಿದನು. ಶ್ರೀಯುತ ಸುನಿಲ್ ಕುಮಾರ್‌ರವರನ್ನು ತಕ್ಷಣವೇ ಬೌರಿಂಗ್ ಆಸ್ಪತ್ರೆಗೆ ದರ್ಜಾಯಿಸಲಾಗಿ ಅಲ್ಲಿ ಅವರು ತಮಂಗಾದ ಗಾಯದಿಂದ ಮೃತಪಟ್ಟರು.

ದಿನಾಂಕ ೯-೪-೧೯೮೦ ರಂದು ಬೆಳಿಗ್ಗೆ ಸುಮಾರು ೯ ಗಂಟೆಯಲ್ಲಿ ಶ್ರೀಯುತ ಸುನಿಲ್ ಕುಮಾರ್ ರವರ ಮೃತ ದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ತರಲಾಯಿತು. ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರದ ಮುಂದೆ ಬಹಳ ಸಂಖ್ಯೆಯಲ್ಲಿ ಪೋಲೀಸ್ ಅಧಿಕಾರಿಗಳು ಹಾಗೂ ಪೇದೆಗಳು ಸೇರಿದ್ದರು. ಅಲ್ಲಿ ನೆರೆದಿದ್ದ ಪೋಲೀಸರು ಮರಣೋತ್ತರ ಪರೀಕ್ಷೆಯನ್ನು ತೀವ್ರವಾಗಿ ಮಾಡುವಂತೆ ಒತ್ತಾಯಿಸಿದ್ದಾಗಿ ತಿಳಿದು ಬರುತ್ತದೆ. ವೈದ್ಯರಾದ ಡಾ॥ ಚಂದ್ರೇಗೌಡರವರು ಇದನ್ನು ವಿರೋಧಿಸಿ ತಮ್ಮ ಕೆಲಸದಲ್ಲಿ ಆತಂಕ ತಂದೊಡ್ಡಬಾರದಾಗಿ ಹೇಳಿದರೆಂದು ತಿಳಿದು ಬರುತ್ತದೆ. ಇದರಿಂದ ಕೆಲವು ಪೋಲೀಸರು ಕ್ಷುದ್ಧರಾಗಿ ಸದರಿ ವೈದ್ಯರ ಮೇಲೆ ಘೋಷಣೆಗಳನ್ನು ಹಾಕಿದರು.

ಸ್ಥಳಕ್ಕೆ ನಗರದ ಪೋಲೀಸ್ ಕಮಿಷನರ್‌ರವರು ಸುಮಾರು ೧೧ ಗಂಟೆಗೆ ಬಂದರು. ಅಲ್ಲಿ ಸುಮಾರು ೨೦೦ ರಿಂದ ೩೦೦ ಜನರು ಪೋಲೀಸ್ ಸಿಬ್ಬಂದಿ ಸೇರಿದ ಹಾಗೆ ನೆರೆದಿದ್ದು, ಕೆಲವು ಪೋಲೀಸರು ಸಮವಸ್ತ್ರದಲ್ಲಿದ್ದರು. ಹಾಲಿ ಅಮಾನತ್ತಿನಲ್ಲಿದ್ದ ಒಬ್ಬ ಸಬ್ ಇನ್ಸ್‌ಪೆಕ್ಟರ್‌ರವರು ಕೆರಳಿದ ಸ್ಥಿತಿಯಲ್ಲಿದ್ದು ಎತ್ತಿದ ಸ್ವರದಿಂದ ಹಿರಿಯ ಪೋಲೀಸ್ ಅಧಿಕಾರಿಗಳು ತನ್ನನ್ನು ವಿಚಾರಣೆ ಇಲ್ಲದೆ ಅಮಾನತ್ತುಗೊಳಿಸಿದ್ದಕ್ಕಾಗಿ ತೆಗಳಿದರು. ಹಾಗೂ ಕಾರ್ಮಿಕ ಮಂತ್ರಿಗಳು ಸಂಪಂಗಿರಾಮನಗರ ಪೋಲೀಸ್ ಠಾಣೆಗೆ ಭೇಟಿ ಕೊಟ್ಟಿದ್ದಕ್ಕಾಗಿ ಅವರನ್ನು ಟೀಕಿಸಿದರು. ಅಲ್ಲಿದ್ದ ಹಿರಿಯ ಪೋಲೀಸ್ ಅಧಿಕಾರಿಗಳು ಪರಿಸ್ಥಿತಿಯನ್ನು ಚಾಣಾಕ್ಷತೆಯಿಂದ ನಿರ್ವಹಿಸಿದರು.

ಶವದ ಪರೀಕ್ಷೆಯ ನಂತರ ಶವದ ಮೇಲೆ ಹೂಗುಚ್ಛಗಳನ್ನು ಮೃತ ಹೊಂದಿದ ಅಧಿಕಾರಿಯ ಗೌರವ ಪೂರ್ಣ ನೆನಪಿಗೋಸ್ಕರ ಇಡಲಾಯಿತು. ನೆರೆದಿದ್ದ ಪೋಲೀಸರಲ್ಲಿ ಕೆಲವರು ಶವವನ್ನು ಮೆರವಣಿಗೆಯಲ್ಲಿ ವಿಧಾನಸೌಧಕ್ಕೆ ಕೊಂಡೊಯ್ಯುವ ಬಯಕೆಯನ್ನು ವ್ಯಕ್ತಪಡಿಸಿದರು. ಕಮಿಷನರ್ ನವರು ಹಾಗೂ ಇತರ ಅಧಿಕಾರಿಗಳು ಶವವನ್ನು ಮೃತರ ಮನೆಗೆ ತೆಗೆದುಕೊಂಡು ಹೋಗುವ ನಿರ್ಧಾರವನ್ನು ಕೈಗೊಂಡರು. ಕೆಲವು ಪೋಲೀಸರು ಇದನ್ನು ವಿರೋಧಿಸಿದರೂ ಸಹ ಅಧಿಕಾರಿಗಳು ಶವವನ್ನು ಮೃತರ ಮನೆಗೆ ತೆದೆದುಕೊಂಡು ಹೋಗುವಲ್ಲಿ ಹಾಗೂ ಅವರ ಸ್ವಸ್ಥಳ ಮೂಡಿಗೆರೆಗೆ ಸಿಸಿ ಸರ್ಕಲ್ ಮೂಲಕ ಕಳುಹಿಸುವಲ್ಲಿ ಸಫಲರಾದರು.

ಅದೇ ದಿನ ಸಾಯಂಕಾಲ ೫ ಗಂಟೆಯಲ್ಲಿ ನಗರದ ಕಬ್ಬನ್ ಪಾರ್ಕಿನಲ್ಲಿ ಮೃತರ ಗೌರವಾರ್ಥ ಸಂತಾಪಸೂಚಕ ಸಭೆಯನ್ನು ನಡೆಸಲಾಯಿತು. ಸುಮಾರು ೫೦೦ ಜನ ಪೋಲೀಸರು ಹಾಗೂ ಅಧಿಕಾರಿಗಳು ನೆರೆದಿದ್ದರು. ಕರ್ನಾಟಕ ಪೋಲೀಸ್ ಸಂಘದ ನಗರ ಶಾಖೆಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ನೆರೆದವರು ಎರಡು ನಿಮಿಷ ಮೌನವನ್ನು ಆಚರಿಸಿದರು. ಸಭೆಯ ಕೊನೆಯಲ್ಲಿ ನೆರೆದಿದ್ದ ಪೋಲೀಸರಲ್ಲಿ ಕೆಲವರು ಪೋಲೀಸ್ ಕಮಿಷನರ್ ರವರ ವಿರುದ್ಧ ಘೋಷಣೆಗಳನ್ನು ಕೂಗಿದರು.

ದಿನಾಂಕ ೧೧-೪-೧೯೮೦ ರಂದು ಸಾಯಂಕಾಲ ೫ ಗಂಟೆಯಿಂದ ೬ ಗಂಟೆ ಅವಧಿಯಲ್ಲಿ ನಗರದ ಪೋಲೀಸ್ ಸಂಘದ ಶಾಖೆಯು ರಿಚ್‌ಮಂಡ್ ರಸ್ತೆಯ ಕೆ.ಎಸ್.ಆರ್.ಪಿ. ಮೈದಾನದಲ್ಲಿ ಒಂದು ಸಭೆಯನ್ನು ಏರ್ಪಡಿಸಿದ್ದಿತು. ನಗರ ಶಾಖೆಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಅಮಾನತ್ತಿನಲ್ಲಿದ್ದ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್‌ರವರು ಮತ್ತು ಮೂರು ಜನ ಪೋಲೀಸರು ಸಭೆಯನ್ನುದ್ದೇಶಿಸಿ ಮಾತನಾಡಿದರು, ಅವರು ಹಿರಿಯ ಅಧಿಕಾರಿಗಳನ್ನೂ ಹಾಗೂ ಪೋಲೀಸ್ ಕಮಿಷನರ್ ರವರನ್ನೂ ಹಾಗೂ ಪಶ್ಚಿಮ ವಲಯದ ಕಾನೂನು ಮತ್ತು ಶಿಸ್ತಿನ ಡೆಪ್ಯೂಟಿ ಕಮಿಷನರ್ ರವರ ವಿರುದ್ಧ ಆರೋಪಗಳನ್ನು ಮಾಡಿದರು. ಅವರು ಹಿರಿಯ ಅಧಿಕಾರಿಗಳ ತಾರತಮ್ಯವಿಲ್ಲದೆ ಅಮಾನತ್ತು ಗೊಳಿಸುವ ರೀತಿಯನ್ನು ವಿರೋಧಿಸಿದರು. ಹಾಗೂ ಪಶ್ಚಿಮ ವಲಯದ ಕಾನೂನು ಮತ್ತು ಶಿಸ್ತಿನ ಡೆಪ್ಯೂಟಿ ಕಮಿಷನರ್ ರವರ ಅಮಾನತ್ತಿಗೆ ಒತ್ತಾಯಿಸಿದರು. ಕೆಲವರು ಪೋಲೀಸ್ ಸ್ಟೇಷನ್‌ನ ಮಟ್ಟಿದಲ್ಲಿ ರಾತ್ರಿ ಕಾಲದ ತುರ್ತು ಕೆಲಸಗಳಿಗಾಗಿ ವಾಹನ ಸೌಕರ್ಯವನ್ನು ಕೇಳಿಕೊಂಡರು. ಸಭೆಯ ವಿಸರ್ಜನೆಯ ಸಮಯದಲ್ಲಿ ಕೆಲವು ಪೋಲೀಸರು ಕಮಿಷನರ್ ಹಾಗೂ ಪಶ್ಚಿಮ ವಲಯದ ಕಾನೂನು ವಂತ್ತು ಶಿಸ್ತಿನ ಡೆಪ್ಯೂಟಿ ಕಮಿಷನರ್ ರವರ ವಿರುದ್ಧ ಘೋಷಣೆಗಳನ್ನು ಕೂಗಿದರು.

ದಿನಾಂಕ ೧೧-೪-೧೯೮೦ ರಲ್ಲಿ ನಡೆದ ಕರ್ನಾಟಕ ರಾಜ್ಯ ಪೋಲೀಸ್ ಸಂಘದಿಂದ ಸಭೆಯ ನಡವಳಿಕೆಗಳ ಬಗ್ಗೆ ಯಾವುದೇ ವರದಿ ಬಂದಿರುವುದಿಲ್ಲ. ಆದರೆ ಸದರಿ ಸಭೆಯ ಕಾರ್ಯಕಲಾಪಗಳ ವರದಿಯು ದಿನಾಂಕ ೧೨-೪-೧೯೮೦ ವೃತ್ತಪತ್ರಿಕೆಗಳಲ್ಲಿ ಬಂದಿರುತ್ತದೆ. ವೃತ್ತಪತ್ರಿಕೆಗಳಲ್ಲಿ ಬಂದ ವರದಿಗಳ ಆಧಾರದ ಮೇಲೆ ರಾಜ್ಯದ ಐ.ಜಿ.ಪಿ. ಯವರು ಸಂಘವನ್ನು ತಾನು ಯಾವ ಕಾರಣಾಂತರಗಳಿಂದ ಮತ್ತು ನಿಬಂಧನೆಗಳ ಮೇಲೆ ಸಭೆಯನ್ನು ಏರ್ಪಾಡು ಮಾಡಿತು ಎಂಬುವ ಬಗ್ಗೆ ವಿವರಣೆಯನ್ನು ಕೇಳಿರುತ್ತಾರೆ.

ಶ್ರೀ ಪಿ. ರಾಮದೇವ್.—ನಾನು ಕಳುಹಿಸಿರತಕ್ಕ ನೋಟೀಸಿನಲ್ಲಿ ಪೋಲೀಸ್ ಇಲಾಖೆಯ ಕೆಳ ಮಟ್ಟದ ಅಧಿಕಾರಿಗಳಲ್ಲಿ ಅತೃಪ್ತಿ ಮತ್ತು ಅಸಮಾಧಾನ ಉಂಟಾಗುವಂತೆ ಘಟನೆಗಳು ನಡೆದಿವೆ. ಆ ಘಟನೆಗಳ ಹಿನ್ನೆಲೆಯಲ್ಲಿ ಸರ್ಕಾರದವರು ಹೇಳಿಕೆಯನ್ನು ಕೊಡಬೇಕು ಎಂದು ಕೇಳಿದ್ದೆ. ಸರ್ಕಾರದವರು ಸುನಿಲ್ ಕುಮಾರ್ ಅವರ ಮರಣದ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರ ಹಿನ್ನೆಲೆಯಲ್ಲಿ ನಾನು ತಮ್ಮನ್ನು ಕೆಲವು ವಿವರಣೆ ಕೇಳಬೇಕೆಂದಿದ್ದೇನೆ.

ಮೊದಲನೆಯದಾಗಿ, ತಮ್ಮ ಹೇಳಿಕೆಯಂತೆ ಸುನಿಲ್ ಕುಮಾರ್ ಅವರು ಮುನಿರೆಡ್ಡಿಪಾಳ್ಯ ಪೋಲೀಸ್ ಸ್ಟೇಷನ್‌ನಿಂದ ರೈಲ್ವೆಸ್ಟೇಷನಿಗೆ ಎರಡು ಗಂಟೆಗೆ ಅಲ್ಲಿಗೆ ಹೋದರು. ರೈಲ್ವೆಸ್ಟೇಷನ್‌ನ ಹತ್ತಿರ ಕೆಲವರು ಚೂರಿ ಹಿಡಿದುಕೊಂಡು ಗಲಾಟೆ ಮಾಡುತ್ತಿರುವ ಇನ್‌ಫರ್ಮೇಷನ್ ಬಂದಿದೆ. ಬಂದಾಗ, ಈ ಸಬ್ ಇನ್‌ಸ್ಪೆಕ್ಟರ್ ಅವರ ಜೂರಿಸ್‌ಡಿಕ್ಷನ್‌ಗೆ ಗಲಾಟೆ ನಡೆಯುತ್ತಿದ್ದ ಸ್ಥಳ ಬಾರದಿದ್ದರೂ ಇವರೊಬ್ಬರನ್ನೇ ಅಲ್ಲಿಗೆ ಕಳುಹಿಸತಕ್ಕ ಕಾರಣವೇನು ? ಇದನ್ನು ತಾವು ತಿಳಿಸಬೇಕು. ಈ ಸಬ್ ಇನ್‌ಸ್ಪೆಕ್ಟರ್ ಅವರ ಕೊಲೆಗೆ ಪೂರ್ವ ಯೋಜಿತ ಸಿದ್ಧತೆ ಇತ್ತು ಎಂಬ ಸಂಶಯ ಇದೆ. ಇದರ ಬಗ್ಗೆಯೂ ತಾವು ಹೇಳಬೇಕು.

ಎರಡನೆಯದಾಗಿ, ಡಾ॥ ಚಂದ್ರೇಗೌಡರ ವಿರುದ್ಧ ಕೆಲವರು ಘೋಷಣೆಗಳನ್ನು ಕೂಗಿದರು ಎಂದು ತಮ್ಮ ಹೇಳಿಕೆಯಲ್ಲಿ ಕೊಡಲಾಗಿದೆ. ಡಾ॥ ಚಂದ್ರೇಗೌಡರು ಸಾಧು ಲಕ್ಷ್ಮಣಗಿರಿ ಕೇಸ್‌ನಲ್ಲಿ ಪೋಲೀಸರ ಪರವಾಗಿ ವರದಿ ಕೊಡಲಿಲ್ಲವೆಂದು ಅವರಿಗೆ ಕೆಟ್ಟ ಹೆಸರು ತರುವುದಕ್ಕಾಗಿ ಈ ಸಂದರ್ಭವನ್ನು ಅವರ ವಿರುದ್ಧ ಘೋಷಣೆಗಳನ್ನು ಕೂಗುವುದಕ್ಕೆ ಉಪಯೋಗಿಸಿದ್ದಾರೆ. ಈ ವೈದ್ಯರ ಮೇಲೆ ಏನು ಘೋಷಣೆ ಕೂಗಿದ್ದಾರೆ ಎನ್ನುವುದನ್ನೂ ನಮಗೆ ತಿಳಿಸಬೇಕು.

ಮೂರನೆಯದಾಗಿ, ಪೋಲೀಸ್ ಅಧಿಕಾರಿಗಳಲ್ಲಿ ಎರಡು ಗುಂಪು ಇದೆ. ಒಂದು ಗುಂಪು ಬಿ ಪಿ.ಎಸ್ ಆಫೀಸರ್ಸ್‌ಗೆ ಸೇರಿದ್ದು, ಎರಡನೆಯ ಗುಂಪು ಸ್ಟೇಟ್ ಪೋಲೀಸ್ ರೆಕ್ರೂಟೀಸ್‌ಗೆ ಸೇರಿದ್ದುದು. ಇವರಿಬ್ಬರ ಗುಂಪಿನಿಂದಾಗಿ, ಬೆಂಗಳೂರು ನಗರದ ನಾಗರೀಕರಿಗೆ ಶಾಂತಿಯ ವ್ಯವಸ್ಥೆ ಸಿಕ್ಕುವ ಹಾಗಿಲ್ಲ. ಈ ಗುಂಪಿನ ಕೈವಾಡದಿಂದ ಇವತ್ತಿನ ದಿವಸ ಜನರನ್ನು ಯಾರೂ ಹೇಳುವವರು ಇಲ್ಲ ಕೇಳುವವರು ಇಲ್ಲ. ಇದನ್ನು ತಾವು ಚೆನ್ನಾಗಿ ನೋಡಬೇಕು ಎಂದು ನಾನು ಹೇಳುತ್ತಿದ್ದೇನೆ.

ಮೂರನೆಯದಾಗಿ ತಾವು ಏನು ಹೇಳಿದ್ದೀರಿ ಎಂದರೆ ನಗರದ ಪೋಲೀಸ್ ಕಮೀಷನರ್‌ರವರು ಸುಮಾರು ೧೧ ಗಂಟೆಗೆ ಬಂದರು. ಅಲ್ಲಿ ಸುಮಾರು ೨೦೦ ರಿಂದ ೩೦೦ ಜನರು ಪೋಲೀಸ್ ಸಿಬ್ಬಂದಿ ನೆರೆದಿದ್ದು, ಕೆಲವು ಪೋಲೀಸರು ಸಮವಸ್ತ್ರದಲ್ಲಿದ್ದರು. ಹಾಲಿ ಅಮಾನತ್ತಿನಲ್ಲಿದ್ದ ಒಬ್ಬ ಸಬ್ ಇನ್‌ಸ್ಪೆಕ್ಟರ್‌ರವರು ಕೆರಳಿದ ಸ್ಥಿತಿಯಲ್ಲಿದ್ದು ಎತ್ತಿದ ಸ್ವರದಿಂದ ಹಿರಿಯ ಪೋಲೀಸ್ ಅಧಿಕಾರಿಗಳು ತನ್ನನ್ನು ವಿಚಾರಣೆ ಇಲ್ಲದೆ ಅಮಾನತ್ತುಗೊಳಿಸಿದ್ದಕ್ಕಾಗಿ ತೆಗಳಿದರು ಎಂದು ಮತ್ತು ಇದರಲ್ಲಿ ಇನ್ನು ಏನು ಇದೆ ಎಂದರೆ ಹಾಗೂ ಕಾರ್ಮಿಕ ಮಂತ್ರಿಗಳು ಸಂಪಂಗಿರಾಮನಗರ ಪೋಲೀಸ್ ಠಾಣೆಗೆ ಭೇಟಿ ಕೊಟ್ಟಿದ್ದಕ್ಕಾಗಿ ಅವರನ್ನು ಟೀಕಿಸಿದರು, ಅಂತ ಇದೆ. ಅವರು ಏನು ತೆಗಳಿದರು ಅಂತ ನಾನು ಕೇಳುತ್ತೇನೆ. ಇದೇ ವಿಷಯ ಕನ್ನಡ ಪ್ರಭಾದಲ್ಲಿ ಬಂದಿದೆ, ಅದರಲ್ಲಿ ಏನು ಇದೆ ಎಂದರೆ ಹೆಡ್ಡಿಂಗ್‌ನಲ್ಲಿ ''ವಿನಾ ಕಾರಣ ಸಬ್ ಇನ್ಸ್‌ಪೆಕ್ಟರ್ ಸಸ್ಪೆನ್‌ಷನ್'' ಅಂತ ಇದೆ ಮತ್ತು ಅಲ್ಲಿ ಸಬ್ ಇನ್‌ಸ್ಪೆಕ್ಟರ್‌ಗಳಲ್ಲಿ ಕೆಲವರು ಪೋಲೀಸ್ ಕಮೀಷನರನ್ನು ಈ ರೀತಿ ಕೇಳಿದ್ದಾರೆ ಏನೆಂದರೆ ನಮ್ಮನ್ನು ರಾಜಕಾರಿಣಿಗಳ ಮಾತು ಕೇಳಿ ವಿನಾ ಕಾರಣ ಸಸ್ಪೆಂಡ್ ಮಾಡುತ್ತೀರಿ, ನಮಗೆ ನಿಮ್ಮಿಂದ ರಕ್ಷಣೆ ಸಿಗುತ್ತಿಲ್ಲ ಎಂದು. ಈ ರೀತಿ ಅವರು ಕೇಳಿದರೆ ಇದು ತೆಗೆಳಿಕೆ ಹೇಗಾಯಿತು? ಇನ್ನು ಕನ್ನಡ ಪ್ರಭಾದಲ್ಲಿ ಇನ್ನೊಂದು ವಿಷಯ ಬಂದಿದೆ ಅದು ಈ ರೀತಿ ಇದೆ:—

> ''ಸಂಪಂಗಿರಾಮನಗರ ಪೋಲೀಸ್ ಠಾಣೆಗೆ ಕಳೆದ ಶನಿವಾರ ರಾತ್ರಿ ಸಚಿವ ಶ್ರೀ ಸಿ. ಎಂ. ಇಬ್ರಾಹಿಂರವರು ಹೋಗಿ ಅಲ್ಲಿದ್ದ ಸಬ್ ಇನ್‌ಸ್ಪೆಕ್ಟರ್ ಶ್ರೀ ಬೆಳ್ಳಿಯಪ್ಪನವರನ್ನು ಬೈದು ಡಿಸ್‌ಮಿಸ್ ಮಾಡುವ ಬೆದರಿಕೆ'' ಹಾಕಿದರು ಅಂತ ಇದೆ. ಇದು ಬೆದರಿಕೆಯ ಮಾತೇ ಅಲ್ಲವೇ ಹೇಳಿ ಸ್ವಾಮಿ?

ಆದುದರಿಂದ ನಾನು ಕೇಳುವುದು ಇಷ್ಟೆ ತಾವು ಇಲ್ಲಿ ಕೊಟ್ಟಿರತಕ್ಕಂಥಾ ಹೇಳಿಕೆ ಏನು ಇದೆ ಅಧಿಕಾರಿಗಳು ತಮ್ಮ ಮುಂದಿನ ನೇರಕ್ಕೆ ಈ ಹೇಳಿಕೆ ಬರೆದಿದ್ದಾರೇ ವಿನಾ ಇನ್ನೇನೂ ಇಲ್ಲ. ಈವೊತ್ತಿನ ದಿವಸ ಈ ಪೋಲೀಸ್ ಅಸೋಸಿಯೇಷನ್ ಏನು ಇದೆ ಅವರು ೩೧-೫-೧೯೭೯ರಲ್ಲಿ ೪೦ ಡಿಮ್ಯಾಂಡ್‌ಗಳ ಒಂದು ಬೇಡಿಕೆಯನ್ನು ತಮ್ಮ ಮುಂದೆ ಇಟ್ಟಿದ್ದಾರೆ. ಈಗ ಅವರಲ್ಲಿ ಅತೃಪ್ತಿ ಬಂದಿದೆ. ಆದರ ವಿವರಣೆ ಬಗ್ಗೆ ಈಗ ನಾನು ಹೇಳಲು ಹೋಗುವುದಿಲ್ಲ. ಮುಖ್ಯವಾಗಿ ಅವರು ಈಗ ಏನು ಕೇಳಿದ್ದಾರೆ ಎಂದರೆ ಡಿಸಿಪಿಯವರನ್ನು ಸಸ್ಪೆಂಡ್ ಮಾಡಿ ಮತ್ತು ಪೋಲೀಸ್ ಕಮೀಷನರನ್ನು ಟ್ರಾನ್ಸ್‌ಫರ್ ಮಾಡಿ ಎಂದು ಕೇಳಿದ್ದಾರೆ. ಏತಕ್ಕೆಂದರೆ ನಗರದಲ್ಲಿ ನೂರಾರು ಜನರ ಪೋಲೀಸ್ ಕಾನ್‌ಸ್ಟೇಬಲ್ಸ್ ಅವರನ್ನೂ, ನೂರಾರು ಜನ ಸಬ್ ಇನ್‌ಸ್ಪೆಕ್ಟರನ್ನೂ ಸಸ್ಪೆನ್‌ಷನ್ ಮತ್ತು ಡಿಸ್‌ಮಿಸ್ ಮಾಡಿದ್ದಾರೆ, ಹೀಗಾದರೆ ಯಾರಿಗೆ ತಾನೇ ಇದರಲ್ಲಿ ತೃಪ್ತಿಯಿಂದ ಕೆಲಸ ಮಾಡುವುದಕ್ಕೆ ಸಾಧ್ಯ ಇದೆ ಹೇಳಿ ಸ್ವಾಮಿ? ಅವರನ್ನು ಯಾವ ಬೇಸಿಸ್ ಮೇಲೆ ಸಸ್‌ಷನ್ ಮಾಡಿದ್ದೀರಾ ಹೇಳಿ. ನಿಮಗೆ ಇನ್ನೊಂದು ಉದಾಹರಣೆ ಕೊಡಬೇಕಾದರೆ ಸಂಪಂಗಿರಾಮನಗರದ ಪೋಲೀಸ್ ಸ್ಟೇಷನ್‌ನಲ್ಲಿ ಈ ಹಿಂದೆ ನರಸಮ್ಮ ಅನ್ನುವ ಕೇಸ್ ಬಂದಿದ್ದಾಗ ಅಲ್ಲೂ ಒಬ್ಬ ಸಬ್ ಇನ್‌ಸ್ಪೆಕರ್‌ನ್ನು ಸಸ್ಪೆಂಡ್ ಮಾಡಿದ್ದೀರಾ? ಆ ಕೇಸ್‌ನಲ್ಲಿ ಸಬ್ ಇನ್‌ಸ್ಪೆಕ್ಟರ್ ಕೈವಾಡ ಏನೂ ಇಲ್ಲದಿದ್ದರೂ ಸಹ ಅವರನ್ನು ಸಸ್ಪೆಂಡ್ ಮಾಡಿದ್ದೀರಾ? ಈ ರೀತಿಯಾದಂಥಾ ಉದಾಹರಣೆಗಳಗ ಬೇಕಾದಷ್ಟು ಇವೆ?

ಅಧ್ಯಕ್ಷರು.—ತಾವು ಈಗ ಹೇಳುವ ವಿಷಯ ಈಗ ಸಭೆಯ ಮುಂದೆ ಇರತಕ್ಕಂಥಾ ವಿಷಯಕ್ಕೆ ಸಂಬಂಧಪಡುವುದಿಲ್ಲ. ಇದನ್ನೆಲ್ಲಾ ಮುಂದೆ ಬಡ್ಜೆಟ್ ಮೇಲಿನ ಚರ್ಚೆ ಬಂದಾಗ ಎಲ್ಲ ವಿವರಣೆಯನ್ನು ಹೇಳಿ. ಈಗ ಈ ಸಭೆಯ ಮುಂದೆ ಇರತಕ್ಕಂಥಾ ಗಮನ ಸೆಳೆಯುವ ಸೂಚನೆ ಬಗ್ಗೆ ಸ್ವಲ್ಪ ಸಂಕ್ಷಿಪ್ತವಾಗಿ ಹೇಳಿ ಬೇಗನೆ ಮುಗಿಸಿ.

ಶ್ರೀ ಪಿ. ರಾಮದೇವ್.—ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಕೊನೆಯದಾಗಿ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುವುದು ಇಷ್ಟೆ. ಹಿರಿಯ ಪೋಲೀಸ್ ಅಧಿಕಾರಿಗಳು ತಮ್ಮ ಕೈಕೆಳಗೆ ಇರತಕ್ಕಂಥಾ ಅಧಿಕಾರಿಗಳ ಬಗ್ಗೆ ನಡೆದುಕೊಳ್ಳುವಂಥಾ ರೀತಿ ನೀತಿಗಳು ತಮ್ಮ ಗಮನಕ್ಕೆ ಬರುತ್ತದೋ ಇಲ್ಲವೋ ನಮಗೆ ಗೊತ್ತಾಗುವುದಿಲ್ಲ. ಒಟ್ಟಿನಲ್ಲಿ ಈಗ ಜನರಲ್ಲಿ ಏನು ಒಂದು ಭಾವನೆ ಮೂಡಿದೆ ಎಂದರೆ ಪೋಲೀಸ್‌ನವರಲ್ಲೇ ವ್ಯತ್ಯಾಸ ಇದೆ, ಆಶಿಸ್ತು ಇದೆ, ಗುಂಪುಗಾರಿಕೆ ಎಂದು ತಿಳಿದುಕೊಂಡಿದ್ದಾರೆ. ಇದನ್ನು ಸರಿಪಡಿಸಬೇಕು ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಆರ್. ಗುಂಡೂರಾವ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಗಮನ ಸೆಳೆದಿರತಕ್ಕಂಥಾ ಸೂಚನೆ ಬಗ್ಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ ಅವರು ಇದರ ಬಗ್ಗೆ ಸಾಕಷ್ಟು ವಿಷಯವನ್ನು ಹೇಳಿದ್ದಾರೆ. ಅವರು ಏನು ಹೇಳಿದ್ದಾರೆ ಎಂದರೆ ಪೋಲೀಸಿನವರಲ್ಲೇ ವ್ಯತ್ಯಾಸ ಇದೆ, ಶಿಸ್ತು ಇದೆ, ಮತ್ತು ಅವರಲ್ಲಿ ಆಶಿಸ್ತು ಇದೆ, ಮತ್ತು ಗುಂಪುಗಾರಿಕೆ ಇದೆ ಎಂದು ಜನ ಹೇಳುತ್ತಿದ್ದಾರೆ ಇದನ್ನು ಸರಿಪಡಿಸಬೇಕೆನ್ನುವ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ನಾನು ನೇರವಾಗಿ ಉತ್ತರ ಕೊಡಲಿಕ್ಕೆ ಸಾಧ್ಯವಿಲ್ಲಾ. ಗುಂಪುಗಾರಿಕೆ ಇರತಕ್ಕಂಥಾ ಜನರನ್ನು ಸರ್ಕಾರ ಎಷ್ಟರ ಮಟ್ಟಿಗೆ ತಡೆಹಿಡಿಯುವುದಕ್ಕೆ ಸಾಧ್ಯವೋ ಎನ್ನುವುದು ಗೊತ್ತಿಲ್ಲ. ಏತಕ್ಕೆಂದರೆ ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಆತ್ಮಶ್ಲಾಘನೆ ಇರುತ್ತದೆ. ಯಾವನಾದರೂ ಒಬ್ಬ ಅಧಿಕಾರಿ ಸರಿಯಾಗಿ ಕೆಲಸ ಮಾಡದೇ ಹೋದರೆ ಮೇಲಾಧಿಕಾರಿಗಳು ಏನಾದರೂ ಅವರ ಮೇಲೆ ಕ್ರಮ ತೆಗೆದುಕೊಂಡರೆ ಅದಕ್ಕೂ ಕೂಡ ಒಂದು ರೀತಿಯಾದ ಆರೋಪವನ್ನು ಹೊರಿಸುತ್ತಾರೆ ಇಲ್ಲವೇ ಮೇಲಾಧಿಕಾರಿಗಳು ಯಾವುದಾದರೂ ಒಂದು ಕಾರಣದಿಂದ ಆ ಕಾರಣ ನಿಜವಾಗಿದ್ದರೂ ಸಹ ಅವನ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡರೂ ಕೂಡ ಒಂದು ಆರೋಪ ಹೊರಿಸುತ್ತಾರೆ. ಶಿಸ್ತಿನ ಕ್ರಮ ಒಂದು ವೇಳೆ ಏನಾದರೂ ತೆಗೆದುಕೊಳ್ಳದೇ ಹೋದರೆ ಅದಕ್ಕೂ ಕೂಡ ಒಂದು ಆರೋಪ ಹೊರಿಸತ್ತಾರೆ. ಹೀಗಿರುವುದರಿಂದ ಅವರು ಏನು ಮಾಡುವುದಕ್ಕೆ ತಾನೇ ಸಾಧ್ಯ ಇದೆ ಹೇಳಿ. ಒಟ್ಟಿನಲ್ಲಿ ನಾನು ಹೇಳಬೇಕಾದರೆ ಶಿಸ್ತು ಪಾಲನೆಯೇ ಪ್ರಧಾನವಾಗಿರುವ ಈ ಇಲಾಖೆಯ ವಿಚಾರದಲ್ಲಿ ಹೆಚ್ಚಿನ ವಿವರಗಳಿಗೆ ನಾವು ಅಷ್ಟಾಗಿ ಹೋಗಬಾರದು ಎಂದು ಹೇಳುತ್ತೇನೆ. ಬೇಕಾದರೆ ಎಲ್ಲೆಲ್ಲಿ ಈ ಇಲಾಖೆಯಲ್ಲಿ ತಪ್ಪು ನಡೆದಿದೆ ಅದನ್ನು ಸರ್ಕಾರದ ಗಮನಕ್ಕೆ ತನ್ನಿ ಇಂತಿಂಥಾ ಕಡೆ ಇಂತಿಂಥಾ ತಪ್ಪು ನಡೆದಿದೆ ಎನ್ನುವುದನ್ನು ನೀವು ಖಾತರಿ ಮಾಡಿಕೊಂಡು ಬಂದು ನನಗೆ ಹೇಳಿ, ಅದನ್ನು ತಪ್ಪಿಸುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡೋಣ. ಇವರ ಮೇಲೆ ಸಾಮೂಹಿಕವಾಗಿ ವ್ಯಾಖ್ಯಾನ ಇದ್ದೇ ಇದೆ. ನಾನು ಈ ಇಲಾಖೆಯ ಮೇಲೆ ಹೀಗೆ ಹೇಳುತ್ತಾನೆ ಎಂದು ತಾವು ಅನ್ಯಥಾ ತಿಳಿದುಕೊಳ್ಳಬೇಡಿ ಅದನ್ನು ಹಾಗೆ ಮಾಡಬೇಕು ಹೀಗೆ ಮಾಡಬೇಕು ಎಂದು ಹೇಳಿದರೆ ಅದು ಆಗುವುದಿಲ್ಲ. ಪೋಲೀಸಿನವರೂ ಸಹ ತಮ್ಮ ಕರ್ತವ್ಯ ಏನು ಇದೆ ಅದನ್ನು ಮಾಡಬೇಕು ಹಾಗೆಯೇ ಮೇಲಾಧಿಕಾರಿಗಳೂ ಸಹ ತಮ್ಮ ಕರ್ತವ್ಯ ಮಾಡಬೇಕೋ ಅದನ್ನು ಮಾಡಬೇಕು. ಆದರೆ ಈಗ ಪೋಲೀಸಿನವರು ಏನು ಕೆಲಸ ಮಾಡುತ್ತಿದ್ದಾರೆ ಆ ಬಗ್ಗೆ ಅವರು ಮಾಡುವ ಕರ್ತವ್ಯದಲ್ಲಿ ಇನ್ನೂ ಸ್ವಲ್ಪ ಜಾಸ್ತಿ ಕೆಲಸಮಾಡಬೇಕಾಗಿತ್ತು ಅನ್ನುವ ಆಪಾದನೆ ಇದೆ. ನಾನು ಹೇಳುವುದು ಇಷ್ಟೆ. ಪೋಲೀಸಿನವರೇನಾದರೂ ಕೆಲಸ ಕಡಿಮೆ ಮಾಡಿದರೆ ಅವರು ಹೆಚ್ಚಾಗಿ ಕೆಲಸ ಮಾಡಲಿಲ್ಲಾ ಎನ್ನುವ ಆಪಾದನೆ ಬರುತ್ತದೆ, ಅವರೇನಾದರೂ ಸ್ವಲ್ಪ ಕಡಿಮೆ ಕೆಲಸ ಮಾಡಿದರೆ ಅದಕ್ಕೂ ಒಂದು ರೀತಿಯಾದ ಆಪಾದನೆ ಬರುತ್ತದೆ. ಆದುದರಿಂದ ಈ ವಿಷಯದಲ್ಲಿ ನಾನು ಹೇಳುವುದು ಇಷ್ಟೆ, ಸರ್ಕಾರಕ್ಕಾದರೂ ಅಷ್ಟೆ, ಸದಸ್ಯರಿಗಾದರೂ ಅಷ್ಟ, ಸಾರ್ವಜನಿಕರಿಗಾದರೂ ಅಷ್ಟೆ. ಅವರು ಮಾಡತಕ್ಕ ಕೆಲಸವನ್ನು ಸ್ವಲ್ಪ ಎಚ್ಚರಿಕೆಯಿಂದ ನಿರ್ವಹಿಸಬೇಕು ಜೊತೆಗೆ ಅದರ ಪೂರ್ಣ ಅರಿವನ್ನೂ ತಿಳಿದಿರಬೇಕು. ತಮಗೆ ಹೇಳಬೇಕಾದರೆ ಯಾವ ಪೋಲೀಸಿನವರಿಗಾಗಲಿ ಯಾರಿಗೇ ಆಗಲಿ ಸಾರ್ವಜನಿಕರ ಕಡೆ ಗಲಾಟೆ ಆದ ಪಕ್ಷದಲ್ಲಿ ಇದು ನನ್ನ ಜ್ಯೂರಿಸ್‌ಡಿಕ್ಷನ್‌ಗೆ ಬರುವುದಿಲ್ಲ ಅಂತ ತಿಳಿದುಕೊಳ್ಳಬಾರದು. ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಯಾವುದೆ ಭಾಗದಲ್ಲಿ ಹೋದರೂ ಕೂಡ ಅಲ್ಲೇನಾದರೂ ಸಾರ್ವಜನಿಕರ ಗಲಾಟೆ ಆಗುತ್ತಾ ಇದ್ದರೆ ಅಲ್ಲಿನ ಜನರನ್ನು ರಕ್ಷಣೆ ಮಾಡಬೇಕಾದ್ದು ಅವರ ಕರ್ತವ್ಯವಾಗಿರಬೇಕು. ಇದು ನನ್ನ

ಜ್ಯೂರಿಸ್‌ಡಿಕ್ಷನ್ ಬರುವುದಿಲ್ಲ ಅಂತ ತಿಳಿಯಬಾರದು. ಅವರ ಜ್ಯೂರಿಸ್‌ಡಿಕ್ಷನ್ ಬರಲಿ ಬರದೇ ಇರಲಿ ಅವರೇನಾದರೂ ಯಾವ ಭಾಗದಲ್ಲಾದರೂ ಹೋದರೆ ಅಲ್ಲೇನಾದರೂ ಸಾರ್ವಜನಿಕವಾಗಿ ಗಲಾಟೆ ನಡೆಯುತ್ತಾ ಇದ್ದರೆ ಆ ಜನರನ್ನು ರಕ್ಷಣೆ ಮಾಡಬೇಕಾದ್ದು ಮತ್ತು ಅಲ್ಲಿನ ಅಪಾಯವನ್ನು ತಪ್ಪಿಸಬೇಕಾದ್ದು ಅವರ ಕರ್ತವ್ಯ ಎಂದು ತಿಳಿದುಕೊಳ್ಳಬೇಕು. ಬೆಂಗಳೂರಿನಲ್ಲಿ ಒಂದು ಕಡೆ ಗಲಾಟೆ ನಡೆಯುತ್ತಾ ಇದ್ದರೆ ಯಾವುದಾದರೂ ಜ್ಯೂರಿಸ್‌ಡಿಕ್ಷನ್ ಸಬ್ ಇನ್‌ಸ್ಪೆಕ್ಟರು ಅದನ್ನು ನೋಡಿದಾಗ ಇದು ನನ್ನ ಜ್ಯೂರಿಸ್‌ಡಿಕ್ಷನ್‌ಗೆ ಬರುವುದಿಲ್ಲ ತಿಳಿಯಬಾರದು, ಅಲ್ಲಿ ಸಾರ್ವಜನಿಕರ ಹಿತರಕ್ಷಣೆಯ ಕಡೆ ಗಮನ ಕೊಟ್ಟು ಕೆಲಸ ಮಾಡಬೇಕಾಗುತ್ತೆ. ಅದೇ ರೀತಿಯಾಗಿ ಇದರಲ್ಲೂ ನಡೆದಿದೆ. ನಿನ್ನೆ ರಾತ್ರಿ ಬಂಧಿತರಾದ ಮಹಿಳೆಯರನ್ನು ವಿಲ್ಸನ್ ಗಾರ್ಡನ್‌ನಲ್ಲಿರುವ ರಕ್ಷಣಾ ಗೃಹಕ್ಕೆ ವ್ಯಾನಿನಲ್ಲಿ ಬಿಟ್ಟು ಮುನಿರೆಡ್ಡಿ ಪಾಳ್ಯಕ್ಕೆ ಹಿಂತಿರುಗುತ್ತಿದ್ದಾಗ ದಂಡು ರೈಲ್ವೆ ನಿಲ್ದಾಣದ ಹತ್ತಿರ ಜನರ ಗುಂಪೊಂದು ಪೋಲೀಸ್ ಪೋಲೀಸ್ ಎಂದು ಕೂಗಿಕೊಂಡಾಗ ಇವರು ಅದನ್ನು ಕೇಳಿ ತಡಮಾಡದೇ ಅಲ್ಲಿಯ ಜನರನ್ನು ರಕ್ಷಿಸಲು ಹೋದಾಗ ಆತನು ಇವರಿಗೆ ಚೂರಿ ಹಾಕಿದ್ದಾನೆ. ನಂತರ ಇವರನ್ನು ಆಸ್ಪತ್ರೆಗೆ ಸಾಗಿಸಿದ ಮೇಲೆ ಅಲ್ಲಿ ತೀರಿಹೋಗಿದ್ದಾರೆ. ಜೊತೆಗೆ ಇನ್ನೂ ಇಬ್ಬರು ಪೋರ್ಟರುಗಳಿಗೆ ಚೂರಿ ಹಾಕಿದ್ದಾನೆ. ಅವರೂ ಸಹ ಸತ್ತು ಹೋಗಿದ್ದಾರೆ. ಆದುದರಿಂದ ನಾನು ಮಾನ್ಯ ಸದಸ್ಯರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದರ ಹಿನ್ನೆಲೆ ಹಾಗೆ ಇದೆ ಹೀಗೆ ಇದೆ ಅಂತ ಬರೇ ಊಹಾಪೋಹಗಳಿಗೆ ಅವಕಾಶ ಕೊಡಬೇಡಿ ಎಂದು. ಹೀಗಾದರೆ ಸಾರ್ವಜನಿಕರಿಗೆ ಉಪಕಾರ ಮಾಡುವುದಕ್ಕಾಗುವುದಿಲ್ಲ. ಅಲ್ಲದೆ ಇದರ ಬಗ್ಗೆ ನಿಷ್ಪಕ್ಷಪಾತವಾದ ವಿಚಾರಣೆಯನ್ನೂ ಸಹ ನಡೆಸುವುದಕ್ಕೆ ಸಹಾಯಕವಾಗುವುದಿಲ್ಲ. ಆದುದರಿಂದ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ ಈ ಒಂದು ಇನ್ಸಿಡೆಂಟ್ ಏನು ಇದೆ ಇದರ ಬಗ್ಗೆ ವಿಚಾರಣೆ ನಡೆಸುವುದಕ್ಕೆ ಮೇಲಾಧಿಕಾರಿಗಳು ಹೇಗೆ ಕೆಲಸ ಮಾಡಬೇಕು, ಕೆಳ ಅಧಿಕಾರಿಗಳು ಹೇಗೆ ಕೆಲಸ ಮಾಡಬೇಕು ಎನ್ನುವುದರ ಬಗ್ಗೆ ನಿಮ್ಮ ಸಲಹೆಗಳನ್ನು ಕೊಡಿ. ಅದನ್ನು ಗಮನದಲ್ಲಿಟ್ಟುಕೊಂಡು ಯಾವ ಯಾವ ಹಂತದಲ್ಲಿ ಅವುಗಳನ್ನು ಎಲ್ಲೆಲ್ಲಿ ಸರಿಪಡಿಸಬೇಕೊ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಬರೇ ಊಹಾಪೋಹಗಳಿಗೆ ಅವಕಾಶ ಮಾಡಿಕೊಡಬೇಡಿ. ಬೇರೆ ರಾಜ್ಯಗಳಿಗೆ ಮಂತ್ರಿ ನಮ್ಮ ರಾಜ್ಯದ ಪೋಲೀಸ್ ಇಲಾಖೆಯನ್ನು ಹೋಲಿಸಿ ನೋಡಿದರೆ ಇಲ್ಲಿ ಬಹಳ ಉತ್ತಮವಾಗಿ ನಡೆಯುತ್ತಾ ಇದೆ ಎಲ್ಲರೂ ಹೊಗಳುತ್ತಾ ಇದ್ದಾರೆ. ಎಲ್ಲಾ ರಾಜ್ಯಗಳಲ್ಲಿ ಏನು ಒಂದು ಗಲಾಟೆ ನಡೆದಿದೆಯೋ ಮತ್ತು ಅಲ್ಲಿಯ ಅಪರಾಧಗಳ ಸಂಖ್ಯೆಯನ್ನೂ ಕೂಡ ತೆಗೆದುಕೊಂಡು ಅದನ್ನು ನಮ್ಮ ರಾಜ್ಯಕ್ಕೆ ಹೋಲಿಸಿ ನೋಡಿದರೆ ನಮ್ಮ ರಾಜ್ಯದಲ್ಲಿ ಏನೇನೂ ನಡೆದಿಲ್ಲಾ ಎಂದು ಹೇಳಬಹುದು. ನಮ್ಮ ರಾಜ್ಯದಲ್ಲಿ ಅಷ್ಟರಮಟ್ಟಿಗೆ ಶಾಂತಿಯಿಂದ ಕೆಲಸ ನಡೆಯುತ್ತಾ ಇದೆ ಎಂದು ಹೇಳಬಹುದು. ನಾಳೆ ದಿವಸ ತಾವು ಸರ್ಕಾರ ನಡೆಸಿದರೂ ಕೂಡ ಒಂದು ತಿಂಗಳಿನಲ್ಲೇ ಎಲ್ಲವನ್ನೂ ತಪ್ಪಿಸುತ್ತೇವೆಂದಾಗಲಿ, ಒಂದು ದಿವಸದಲ್ಲೇ ಇವೆಲ್ಲವನ್ನೂ ತಪ್ಪಿಸುತ್ತೇವೆಂದಾಗಲಿ ಹೇಳಿದರೆ ಅದು ಬರೇ ಹೊಗಳಿಕೆಯ ಮಾತು ಆಗುತ್ತದೆಯೇ ವಿನಾ ಅದರಿಂದ ಏನೂ ಕಾರ್ಯಗತವಾಗುವುದಿಲ್ಲ. ನಾವು ಏನು ಮಾಡುತ್ತಿದ್ದೇವೆಂದು ಜನ ಎದುರು ನೋಡುತ್ತಿದ್ದಾರೆ. ಆದುದರಿಂದ ಇದರ ಬಗ್ಗೆ ಸರ್ಕಾರ ಸಾಕಷ್ಟು ಎಚ್ಚರಿಕೆ ವಹಿಸಿರುವುದರಿಂದ ತಾವುಗಳು ಸರ್ಕಾರಕ್ಕೆ ಈ ವಿಚಾರದಲ್ಲಿ ಒಳ್ಳೊಳ್ಳೆಯ ಸಲಹೆಗಳನ್ನು ಕೊಟ್ಟರೆ ಸೂಕ್ತವಾಗಿ ಅದನ್ನು ಗಮನದಲ್ಲಿಟ್ಟುಕೊಂಡು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈಗ ಇದು ವಿಚಾರಣೆಯ ಹಂತದಲ್ಲಿದೆ. ಪೋಲೀಸ್ ಇಲಾಖೆಯ ನ್ಯೂನತೆಯ ಬಗ್ಗೆ, ಪೋಲೀಸ್ ಅಶಿಸ್ತಿನ ಬಗ್ಗೆ ವಿಚಾರಣೆ ನಡೆಸಿ ಕೂಲಂಕಷವಾದ ತನಿಖೆ ನಡೆಸುವುದಲ್ಲದೆ ಮುಂದೆ ಈ ಪೋಲೀಸ್ ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಬಂದಾಗ ಆದಕ್ಕೆಉತ್ತರ ಕೊಡುವ ಸಂದರ್ಭದಲ್ಲಿ ವ್ಯವಸ್ಥಿತವಾಗಿ ಈ ಬಗ್ಗೆ ಏನೇನು ಕಾರ್ಯಕ್ರಮ ಕೈಗೊಂಡಿದ್ದೇವೆ ಎನ್ನುವುದನ್ನು ವಿವರವಾಗಿ ತಿಳಿಸುತ್ತೇನೆ. ಆದುದರಿಂದ ಇದರ ಹಿನ್ನೆಲೆ ಹಾಗೆ ಇದೆ, ಹೀಗೆ ಇದೆ ಅಂತ ಬರೇ ಊಹಾಪೋಹಕ್ಕೆ ಅವಕಾಶ ಕೊಡಬೇಡಿ. ಆದಷ್ಟು ಮಟ್ಟಿಗೆ ಇದರಲ್ಲಿ ಕೊರತೆ ಏನು ಇದೆ ಅದನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ.